ಸಂಪಾದಕೀಯ

# ಶ್ರೀರಾಮಕೃಷ್ಣರ ಅಯಸ್ಕಾಂತೀಯ ವ್ಯಕ್ತಿತ್ವ

"ಅನಂತವಾದುದು ಸಾಂತದ ಮೂಲಕ ವ್ಯಕ್ತವಾಗುವುದಕ್ಕೆ ಪ್ರಯತ್ನಿಸುತ್ತಿದೆ. ಆದರೆ ಇದು ಅಸಾಧ್ಯವೆಂದು ಗೊತ್ತಾಗುವ ಒಂದು ಕಾಲ ಬರುತ್ತದೆ. ಆಗ ಅದು ತನ್ನ ಪ್ರಯತ್ನದಿಂದ ಹಿಮ್ಮೆಟ್ಟುತ್ತದೆ. ಈ ಹಿಮ್ಮೆಟ್ಟುವಿಕೆಯೇ ತ್ಯಾಗ. ಇದೇ ಧರ್ಮದ ನಿಜವಾದ ಆರಂಭ," — ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ (**ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ, ಸಂ.೨, ಪು. ೪೦**).

ಅಂದರೆ ಸಾಂತದಿಂದ ದೂರವಾಗಿ ಅನಂತದೆಡೆಗೆ ಹೋಗುವುದೇ ತ್ಯಾಗ. ಆದ್ದರಿಂದ ತ್ಯಾಗದಲ್ಲಿ ನಕಾರಾತ್ಮಕ ಮತ್ತು ಸಕಾರಾತ್ಮಕ ಎರಡೂ ಅಂಶಗಳಿವೆ. ಇದನ್ನೇ ಶ್ರೀರಾಮಕೃಷ್ಣರು **ವಿಷಯೇ ವಿರಾಗ್, ಭಗವದನುರಾಗ್** ಎಂದು ಹೇಳುತ್ತಿದ್ದುದು. ವಿಷಯ ವಸ್ತುಗಳ ಕಡೆ ಇರುವ ಆಕರ್ಷಣೆ ಕಡಮೆಯಾದಷ್ಟೂ ಭಗವಂತನ ಕಡೆ ಆಕರ್ಷಣೆ ಅಧಿಕವಾಗುತ್ತದೆ. ಶ್ರೀರಾಮಕೃಷ್ಣರು ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಿದ್ದರು: "ಒಂದು ಕಬ್ಬಿಣದ ತುಂಡಿಗೆ ತುಕ್ಕು ಹಿಡಿದಿದ್ದರೆ ಅದನ್ನು ಅಯಸ್ಕಾಂತ ಆಕರ್ಷಿಸಲಾರದು. ಆ ತುಕ್ಕನ್ನು ತೆಗೆದು ಶುದ್ಧಗೊಳಿಸಿದರೆ ಅಯಸ್ಕಾಂತವು ಅದನ್ನು ತಾನಾಗಿಯೇ ಆಕರ್ಷಿಸುತ್ತದೆ." ಮನಸ್ಸಿನಲ್ಲಿರುವ ವಿಷಯವಾಸನೆಯೇ ತುಕ್ಕು. ಈ ತುಕ್ಕನ್ನು ಸಾಧನೆಯ ಮೂಲಕ ಹೋಗಲಾಡಿಸಬೇಕು.

> ಎಣ್ಣೆ ತಗಲಿದ ಕಾಗದದ ಮೇಲೆ ಬರೆಯಲಾಗುವುದಿಲ್ಲ. ಅದರಂತೆಯೇ ಇಂದ್ರಿಯ ಭೋಗಾಭಿಲಾಷೆಗಳಿಂದ ಕೆಟ್ಟುಹೋದ ಮನಸ್ಸು ಭಗವಂತನ ಧ್ಯಾನಕ್ಕೆ ಯೋಗ್ಯವಲ್ಲ.
>
> – *ಶ್ರೀರಾಮಕೃಷ್ಣ*

## ಮನಸ್ಸಿಗೆ ತುಕ್ಕು ಹಿಡಿಯದಿರಲಿ

ನಮ್ಮ ಮನಸ್ಸು ಕಬ್ಬಿಣವಿದ್ದಂತೆ. ಅದನ್ನು ವಿಷಯ ಸಂಗವೆಂಬ ತೇವದ ವಾತಾವರಣದಲ್ಲಿ ಇಟ್ಟರೆ ಅದಕ್ಕೆ ತುಕ್ಕು ಹಿಡಿಯುತ್ತದೆ. ತುಕ್ಕು ಹಿಡಿಯುವುದು ಒಂದು ರಾಸಾಯನಿಕ ಕ್ರಿಯೆ. ಇದರ ಮೂಲಕ ಕಬ್ಬಿಣವು ಕಬ್ಬಿಣದ ಡೈಯಾಕ್ಸೈಡ್ ಆಗುತ್ತದೆ, ಅಂದರೆ ಕಬ್ಬಿಣವು ತನ್ನ ಸ್ವರೂಪವನ್ನೇ ಕಳೆದುಕೊಂಡು ಬೇರೆಯ ವಸ್ತುವೇ ಆಗಿಬಿಡುತ್ತದೆ. ಮತ್ತೆ ಅದನ್ನು ಕಬ್ಬಿಣದಂತೆ ಉಪಯೋಗಿಸುವಂತಿಲ್ಲ—ಕಬ್ಬಿಣದ ಶಕ್ತಿ ಅದರಲ್ಲಿರುವುದಿಲ್ಲ. ಆರ್‌ಸಿಸಿ ಮನೆಯಲ್ಲಿರುವ ಕಬ್ಬಿಣಕ್ಕೇನಾದರೂ ತುಕ್ಕು ಹಿಡಿದುಬಿಟ್ಟರೆ ಮನೆಯೇ ಸಂಪೂರ್ಣ ಕುಸಿದುಹೋಗುತ್ತದೆ. ಹಾಗೆಯೇ ಮನಸ್ಸಿಗೆ ತುಕ್ಕು ಹಿಡಿದುಬಿಟ್ಟರೆ ಇಡೀ ವ್ಯಕ್ತಿತ್ವವೇ ದುರ್ಬಲವಾಗುತ್ತದೆ. ಮನಸ್ಸು ಇರುವುದೇ ವಿಚಾರಮಾಡುವುದಕ್ಕೆ. ವಿಚಾರಶಕ್ತಿಯು ಕುಂಠಿತವಾದರೆ ಜೀವನವನ್ನು ಸರಿಯಾಗಿ ನಿರ್ವಹಿಸಲಾಗುವುದಿಲ್ಲ. ದೇಶದಲ್ಲಿ ಕಾರ್ಯನೀತಿಯನ್ನು ರೂಪಿಸುವ (policy making) ಸಂಸ್ಥೆಯೆ ದುರ್ಬಲವಾಗಿದ್ದರೆ ಆ ದೇಶ ಪ್ರಬಲವಾಗಿರಲು ಸಾಧ್ಯವೇ ಇಲ್ಲ. ಇದೇ ನಮ್ಮ ವ್ಯಕ್ತಿತ್ವಕ್ಕೂ ಅನ್ವಯಿಸುತ್ತದೆ.

ಆದ್ದರಿಂದ ಮನಸ್ಸಿಗೆ ತುಕ್ಕು ಹಿಡಿಯದಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಕಬ್ಬಿಣವನ್ನು ಎಲ್ಲೇ ಇಟ್ಟರೂ ತುಕ್ಕು ಹಿಡಿಯದಿರಬೇಕಾದರೆ ಅದಕ್ಕೆ ಬೇರೆ ಲೋಹವನ್ನು ಸೇರಿಸಿ ಉಕ್ಕಾಗಿ ಪರಿವರ್ತಿಸಬೇಕು. ಹಾಗೆಯೇ ಮನಸ್ಸಿಗೆ ವೈರಾಗ್ಯ ಮನೋಭಾವವನ್ನು ಸೇರಿಸಿ ಅದರ ಸ್ವಭಾವವನ್ನೇ ಬದಲಾಯಿಸಬೇಕು. ಇದೇ ಶೀಲನಿರ್ಮಾಣ. ಆಗ ಕುಸಂಸ್ಕಾರಗಳ ತುಕ್ಕು ಅದಕ್ಕೆ ಹಿಡಿಯುವುದಿಲ್ಲ. ಶ್ರೀರಾಮಕೃಷ್ಣರು ಹೇಳುವಂತೆ, ಹಿತ್ತಾಳೆಯ ಪಾತ್ರೆಗೆ ಕಲೆ ಹಿಡಿಯುತ್ತದೆ, ಅದನ್ನು ಯಾವಾಗಲೂ ತೊಳೆಯುತ್ತಿರಬೇಕು. ಅದೇ ಚಿನ್ನದ ಪಾತ್ರೆಯಾದರೆ ಕಲೆ ಹಿಡಿಯುವುದಿಲ್ಲ. ಹಾಗೆಯೇ ಮನಸ್ಸೂ ಚಿನ್ನದ ಪಾತ್ರೆಯಾಗಿ ಪರಿವರ್ತಿತವಾದರೆ ಆಗ ನಿತ್ಯಸಾಧನೆಯ ಆವಶ್ಯಕತೆ ಇರುವುದಿಲ್ಲ.

ಸಾಮಾನ್ಯ ಮನಸ್ಸು ಒಂದು ಕಬ್ಬಿಣದ ಪಾತ್ರೆಯಿದ್ದಂತೆ. ಅದರಲ್ಲಿ ಯಾವುದೇ ಆಹಾರ ಪದಾರ್ಥವನ್ನು ಇಡುವಂತಿಲ್ಲ. ಅದೇ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಯಾದರೆ ಏನನ್ನು ಬೇಕಾದರೂ ಇಡಬಹುದು. ಸಾಮಾನ್ಯ ಮನಸ್ಸಿನಲ್ಲಿ ಅತ್ಯಂತ ಶ್ರೇಷ್ಠವಾದ ಆಧ್ಯಾತ್ಮಿಕ ಪದಾರ್ಥವನ್ನು ಇಟ್ಟರೂ ಅದು ಕಲುಷಿತವಾಗುತ್ತದೆ. ಸಾಮಾನ್ಯ ವ್ಯಕ್ತಿಗಳು ಉನ್ನತ ಆಧ್ಯಾತ್ಮಿಕ ಆದರ್ಶಗಳನ್ನೂ ಸಾಮಾನ್ಯ ಮಟ್ಟಕ್ಕೆ ಇಳಿಸಿಬಿಡುತ್ತಾರೆ—ವ್ಯಾಪಾರೀಕರಿಸುತ್ತಾರೆ, ರಾಜಕೀಯಕ್ಕಿಳಿಸುತ್ತಾರೆ. ಆದ್ದರಿಂದಲೇ ಧರ್ಮದ ಹೆಸರಿನಲ್ಲಿ ಇಷ್ಟೊಂದು ಅನ್ಯಾಯ ಅತ್ಯಾಚಾರಗಳು, ಹಿಂಸೆಗಳು ನಡೆಯುತ್ತಿರುವುದು. ಶ್ರೀರಾಮಕೃಷ್ಣರು ಹೇಳುತ್ತಿದ್ದಂತೆ, ಮೊಸರಿಡುವ ಮಣ್ಣಿನ ಪಾತ್ರೆಯಲ್ಲಿ ಯಾವುದೇ ಆಹಾರ ಪದಾರ್ಥವನ್ನು ಇಟ್ಟರೂ ಅದು ಹುಳಿಯಾಗುತ್ತದೆ ಮತ್ತು ಬೇಗನೆ ಕೆಟ್ಟುಹೋಗುತ್ತದೆ. ಸಾಮಾನ್ಯ ಮನಸ್ಸೂ ಅಂತಹುದೇ. ಕಬ್ಬಿಣದಂತಹ ಈ ಮನಸ್ಸಿನಲ್ಲಿರುವ ತುಕ್ಕನ್ನು ಕರ್ಮಯೋಗ ಸಾಧನೆಯ ಮೂಲಕ ಉಜ್ಜಿ ಉಜ್ಜಿ ತೆಗೆಯಬೇಕು. ಮತ್ತೆ ಅದಕ್ಕೆ ತುಕ್ಕು ಹಿಡಿಯದಂತೆ ನೋಡಿಕೊಳ್ಳಬೇಕು. ಧ್ಯಾನ, ಜಪ, ಪ್ರಾರ್ಥನೆ ಮುಂತಾದ ಆಧ್ಯಾತ್ಮಿಕ ಸಾಧನೆಗಳ ಮೂಲಕ ಅದನ್ನು ಉಕ್ಕಾಗಿ ಪರಿವರ್ತಿಸಬೇಕು. ಶ್ರೇಷ್ಠ

ಮಾನವೀಯ ಮೌಲ್ಯಗಳನ್ನು ಬೆಳಸಿಕೊಳ್ಳುವುದರ ಮೂಲಕ ಅದನ್ನು ಸುಂದರ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಯಾಗಿ ಮಾರ್ಪಡಿಸ ಬೇಕು. ಆಗ ಅವರಲ್ಲಿ ಭಗವದ್‌ಭಾವ ಕೆಡದೆ ಉಳಿಯುತ್ತದೆ.

### ಮನಸ್ಸಿನ ಪರಿಶುದ್ಧತೆ ಮತ್ತು ಸ್ಥಿರತೆ

ಕಬ್ಬಿಣ ಗಟ್ಟಿತನ, ಸ್ಥಿರತೆ, ಶಕ್ತಿ ಇತ್ಯಾದಿ ಗುಣಗಳನ್ನು ಸೂಚಿಸುತ್ತವೆ. ಅವಕ್ಕಾಗಿಯೇ ಸ್ವಾಮಿ ವಿವೇಕಾನಂದರು, "ಕಬ್ಬಿಣವಂತಹ ಮಾಂಸಖಂಡ, ಉಕ್ಕಿನಂತಹ ನರಗಳು" ಎಂದು ಉದ್ಗರಿಸಿದರು. ಅಯಸ್ಕಾಂತ ಮತ್ತು ಕಬ್ಬಿಣದ ಉದಾಹರಣೆಯ ಮೂಲಕ ಶ್ರೀರಾಮಕೃಷ್ಣರು ಮನಸ್ಸು ಕಬ್ಬಿಣದಂತಿರಬೇಕೆಂದು ಸೂಚಿಸಿದ್ದಾರೆ. ಕಬ್ಬಿಣ ಎಷ್ಟೇ ಗಟ್ಟಿಯಾದರೂ ಅದರ ಸರಳು ಹೇಗೆ ಬೇಕಾದರೂ ಬಗ್ಗುತ್ತದೆ. ಹಾಗೆಯೇ ಮನಸ್ಸೂ ಕೂಡ ಬಾಗುವುದಕ್ಕೆ ಸಿದ್ಧವಿರಬೇಕು—ಅಂದರೆ ನಮ್ರತೆಯ ಭಾವ ಇರಬೇಕು. ಆದರೆ ಇದು ದುರ್ಬಲನ ನಮ್ರತೆಯಲ್ಲ. ಕಬ್ಬಿಣ ಎಷ್ಟೇ ಬಗ್ಗಿದರೂ ಮುರಿಯುವುದಿಲ್ಲ.

ಏಕೆ ಎಂದು ತಿಳಿಯದೆಯೆ ದೇವರನ್ನು ಪ್ರೀತಿಸುವ ಸ್ಥಿತಿಯೊಂದಿದೆ. ಅದನ್ನು ಪಡೆದ ಮೇಲೆ ಮತ್ತಾವ ಆಸೆಯೂ ಇರುವುದಿಲ್ಲ

—ಶ್ರೀರಾಮಕೃಷ್ಣ

ಮನಸ್ಸು ಪರಿಶುದ್ಧವಾದಾಗ, ಅಂದರೆ ಅದರ ತುಕ್ಕು ಹೊರಟು ಹೋದಾಗ, ಭಗವಂತನೇ ಅದನ್ನು ಆಕರ್ಷಿಸುತ್ತಾನೆ—ಅಯಸ್ಕಾಂತ ಕಬ್ಬಿಣವನ್ನು ಆಕರ್ಷಿಸುವಂತೆ. ಈ ಆಕರ್ಷಣೆಗೆ ಕಾರಣ ಪರಿಶುದ್ಧ ಮನಸ್ಸು ಆಧ್ಯಾತ್ಮಿಕ ಸ್ವಭಾವವನ್ನು ಪಡೆಯುವುದು—ಚೈತನ್ಯಾತ್ಮಕವಾಗುವುದು—ಒಂದು ಕಬ್ಬಿಣದ ಗುಂಡು ಬೆಂಕಿಯಲ್ಲಿ ಕಾದು ಕೆಂಪಗಾಗುವಂತೆ. ಭಗವಂತನೂ ಅಧ್ಯಾತ್ಮಸ್ವರೂಪ ನಾದುದರಿಂದ ಅಧ್ಯಾತ್ಮಸ್ವಭಾವದ ಮನಸ್ಸನ್ನು ಸ್ವಾಭಾವಿಕವಾಗಿಯೇ ಆಕರ್ಷಿಸುತ್ತಾನೆ. ಈ ಆಕರ್ಷಣೆಯನ್ನೇ, ಈ ಸೆಳೆತವನ್ನೇ ಭಗವದ್ ವ್ಯಾಕುಲತೆ ಎಂದು ಕರೆಯುವುದು. ಭಗವಂತನು ಮನಸ್ಸನ್ನು ಎಳೆಯುವುದಕ್ಕೆ ಪ್ರಾರಂಭಿಸಿದಾಗ ವ್ಯಕ್ತಿ ಭಗವಂತನೆಡೆಗೆ ಓಡಿಹೋಗಲು ಚಡಪಡಿಸುತ್ತಾನೆ. ಶ್ರೀರಾಮಕೃಷ್ಣರಲ್ಲಿ ನಾವು ಈ ವ್ಯಾಕುಲತೆಯನ್ನು ಕಾಣುತ್ತೇವೆ.

### ಭಗವದಾಕರ್ಷಣೆಯ ಪ್ರಾಬಲ್ಯ

ಶ್ರೀರಾಮಕೃಷ್ಣರು ಈ ಭಗವದಾಕರ್ಷಣೆ ಎಷ್ಟು ಪ್ರಬಲವಾಗಿರಬೇಕು ಎಂಬುದನ್ನು ಉದಾಹರಣೆಯ ಮೂಲಕ ವಿವರಿಸುತ್ತಾರೆ : ಪತಿವ್ರತಾ ಸ್ತ್ರೀಗೆ ಪತಿಯ ಕಡೆಗಿರುವ ಆಕರ್ಷಣೆ, ತಾಯಿಗೆ ಮಗುವಿನ ಕಡೆಗಿರುವ ಆಕರ್ಷಣೆ ಮತ್ತು ಜಿಪುಣನಿಗೆ ಹಣದ ಕಡೆಗಿರುವ ಆಕರ್ಷಣೆ— ಈ ಮೂರೂ ಆಕರ್ಷಣೆಗಳು ಒಟ್ಟುಗೂಡಿ ಭಗವಂತನ ಕಡೆಗೆ ಹರಿಯಬೇಕು. ನಮ್ಮ ಭಗವದ್ಭಕ್ತಿ ಹೇಗಿರಬೇಕೆಂಬುದನ್ನು ಈ ಮೇಲಿನ ಉದಾಹರಣೆಗಳ ಮೂಲಕ ಶ್ರೀರಾಮಕೃಷ್ಣರು ವಿವರಿಸಿದ್ದಾರೆ. ಪತಿವ್ರತಾ ಸ್ತ್ರೀಗೆ ಪತಿಭಕ್ತಿ ಅನನ್ಯೈಕಾಂತಿಕವಾಗಿರುತ್ತದೆ ಮತ್ತು ಅದನ್ನು ಅವ್ಯಭಿಚಾರಿ ಎಂದೂ ಕರೆಯುತ್ತಾರೆ. ಹಾಗೆಯೇ ನಮ್ಮ ಪ್ರೀತಿಯು ಭಗವಂತನ ಕಡೆ ಏಕಮುಖವಾಗಿ ಹರಿಯಬೇಕು, ಅವನಲ್ಲದೆ ಬೇರೇನನ್ನೂ ಪ್ರೀತಿಸಬಾರದು. ಭಕ್ತಿಯ ಇನ್ನೊಂದು ಲಕ್ಷಣ ಭಗವಂತನಿಂದ ಏನನ್ನೂ ನಿರೀಕ್ಷಿಸದೆ ಇರುವುದು—ಇದು ಪ್ರೀತಿಗಾಗಿ ಪ್ರೀತಿ. ತಾಯಿ ಮಗುವನ್ನು ಹಾಗೆಯೇ ಪ್ರೀತಿಸುತ್ತಾಳೆ. ಮಗುವಿನಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ಭಕ್ತಿಯ ಇನ್ನೊಂದು ಲಕ್ಷಣ ಭಗವಂತನೇ ನಮ್ಮ ಆಸ್ತಿ, ನಮ್ಮ ಸರ್ವಸ್ವವಾಗಿರುವುದು. ಜಿಪುಣನು ಹೇಗೆ ಹಣವನ್ನು ತನ್ನದನ್ನಾಗಿ ಮಾಡಿಕೊಳ್ಳುತ್ತಾನೊ ನಾವು ಭಗವದ್‌ವಸ್ತುವನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕು. ಜಿಪುಣನ ಲೋಭ ಭಗವಂತನ ವಿಷಯದಲ್ಲಿ ಇರಬೇಕು.

ಅಯಸ್ಕಾಂತ ತಾನು ಸುಮ್ಮನೆ ನಿಷ್ಕ್ರಿಯವಾಗಿ ಬಿದ್ದಿರುತ್ತದೆ. ಕೇವಲ ಅದರ ಸಾನ್ನಿಧ್ಯವೇ ಕಬ್ಬಿಣವನ್ನು ಆಕರ್ಷಿಸುತ್ತದೆ —ಅದು ತಾನೇ ತಾನಾಗಿ ಏನೂ ಮಾಡಬೇಕಾಗಿಲ್ಲ. ಹಾಗೆಯೇ ಭಗವಂತನು ತಾನೇನೂ ಮಾಡದೆ ಪರಿಶುದ್ಧ ಜೀವಿಗಳನ್ನು ಆಕರ್ಷಿಸುತ್ತಾನೆ. ಆಗ ಜೀವಿಯ ಅಂತರಾಳದಲ್ಲಿ ಒಂದು ಬಗೆಯ ಸೆಳೆತ ಉಂಟಾಗುತ್ತದೆ. ಅದು ಉಂಟಾದಾಗ ರಾಜನು ತನ್ನ ಚಕ್ರಾಧಿಪತ್ಯವನ್ನೇ ತೊರೆದು ಓಡುತ್ತಾನೆ, ಆಗ ಇಂದ್ರಿಯ ಸುಖಗಳೆಲ್ಲ ಅಸಹ್ಯವಾಗುತ್ತವೆ, ಆತ್ಮೀಯ ಬಂಧುಗಳೆಲ್ಲಾ ಪರಕೀಯರಾಗುತ್ತಾರೆ, ಸಂಸಾರವೊಂದು ಮಹಾ ಸುಳಿಯಾಗುತ್ತದೆ ಮತ್ತು ಇಡೀ ಜಗತ್ತೇ ಶೂನ್ಯವಾಗುತ್ತದೆ. ಶ್ರೀಕೃಷ್ಣನ ಕೊಳಲಿನ ಧ್ವನಿಯನ್ನು ಕೇಳಿದಾಗ ಗೋಪ ಗೋಪಿಯರೆಲ್ಲ ತಾವು ಮಾಡುತ್ತಿದ್ದ ಕೆಲಸವನ್ನೆಲ್ಲ ಅಲ್ಲಿಗಲ್ಲಿಗೆ ಬಿಟ್ಟು, ತಮ್ಮ ಬಂಧು ಮಿತ್ರರು, ಮಡದಿ ಮಕ್ಕಳು, ಪತಿ ಯಾರನ್ನೂ ಪರಿಗಣಿಸದೆ ಆ ಧ್ವನಿಯ ಕಡೆ ಓಡುತ್ತಿದ್ದರು. ಭಗವದಾಕರ್ಷಣೆ ಎಂದರೆ ಅಂತಹದು.

ಶ್ರೀರಾಮಕೃಷ್ಣರು ಹೇಳುತ್ತಿದ್ದರು : ಸಮುದ್ರದ ಮಧ್ಯೆ ಒಂದು ದೊಡ್ಡ ಅಯಸ್ಕಾಂತ ಪರ್ವತವಿದೆಯಂತೆ. ಏನಾದರೂ ಅದರ ಹತ್ತಿರ ಹಡಗು ಹೋದರೆ ಆ ಹಡಗಿನಲ್ಲಿರುವ ಬೋಲ್ಟು, ನಟ್ಟು ಮುಂತಾದ ಕಬ್ಬಿಣದ ಭಾಗಗಳೆಲ್ಲ ಕಳಚಿಕೊಂಡು ಪರ್ವತದ ಕಡೆ ಆಕರ್ಷಿತವಾಗಿ ಹೋಗಿಬಿಡುತ್ತವೆಯಂತೆ, ಮತ್ತು ಹಡಗು ಮುರಿದು ನೀರು ಪಾಲಾಗುತ್ತದೆ. ನಿಜವಾಗಿ ಆ ಹಡಗನ್ನು ಹಿಡಿದಿರಿಸಿದ ಅಂಶವೇ ಕಬ್ಬಿಣ, ಅದೇ ಅದರ ಪ್ರಧಾನ ಅಂಶ. ಹಾಗೆಯೇ ನಮ್ಮ ವ್ಯಕ್ತಿತ್ವವೆಂಬ ಹಡಗಿನಲ್ಲಿ ಪ್ರಧಾನ ಅಂಶವೇ ಅಧ್ಯಾತ್ಮ, ಅದೇ ನಮ್ಮನ್ನು ಗಟ್ಟಿಯಾಗಿ ಹಿಡಿದಿರಿಸಿರುವುದು, ನಮಗೆ ನಿಜವಾದ ವ್ಯಕ್ತಿತ್ವವನ್ನು ಕೊಟ್ಟಿರುವುದು. ಅದನ್ನೇ ಭಗವಂತನೆಂಬ ಚುಂಬಕ ಪರ್ವತವು ಆಕರ್ಷಿಸಿಬಿಟ್ಟರೆ ಮತ್ತೆ ಈ ವ್ಯಕ್ತಿತ್ವ ಉಳಿಯುವುದೆಂತು! ಅದು ಪ್ರಕೃತಿಯಲ್ಲಿ ಲೀನವಾಗಿಬಿಡುತ್ತದೆ.

ಹಡಗು ನೀರಿನಲ್ಲಿಯೇ ಇರಬೇಕು. ಹಾಗೆಯೇ ನಾವೂ ಸಂಸಾರದಲ್ಲಿಯೇ ಇರಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ದೋಣಿ ನೀರಿನಲ್ಲಿದ್ದರೆ ಪರವಾಯಿಲ್ಲ, ದೋಣಿಯೊಳಗೆ ನೀರು ಇರಬಾರದು ಎಂದು. ಹಾಗೆಯೇ ನಾವು ಸಂಸಾರದಲ್ಲಿ ಇದ್ದರೆ ತೊಂದರೆಯಿಲ್ಲ; ಸಾಂಸಾರಿಕತೆ ನಮ್ಮೊಳಗೆ ನುಗ್ಗದಂತೆ ನಾವು ಎಚ್ಚರಿಕೆ ವಹಿಸಬೇಕು. ಒಮ್ಮೆ ಕೆಲವರು ದೋಣಿಯಲ್ಲಿ ಪಯಣಿಸುತ್ತಿರುವಾಗ ಒಂದು ಚಿಕ್ಕ ರಂಧ್ರದ ಮೂಲಕ ನೀರು ದೋಣಿಯನ್ನು ಪ್ರವೇಶಿಸತೊಡಗಿತು. ಒಬ್ಬ ಮೇಧಾವಿ ಒಂದು ಉಪಾಯವನ್ನು ಹೇಳಿದ: ದೋಣಿಯಲ್ಲಿ ಇನ್ನೊಂದು ರಂಧ್ರವನ್ನು ಮಾಡಿದರೆ ಆ ನೀರು ಹೊರಗೆ ಹೊರಟುಹೋಗುತ್ತದೆ! ನಾವೂ ಕೂಡ ಅನೇಕಾನೇಕ ಆಶಾರಂಧ್ರಗಳನ್ನು ಮಾಡಿಕೊಂಡು, ಸಾಂಸಾರಿಕತೆ ನಮ್ಮೊಳಗೆ ಪ್ರವೇಶಿಸುವಂತೆ ಮಾಡಿಕೊಂಡು ಸಂಸಾರದ ನೀರಿನಲ್ಲಿ ಮುಳುಗಿಬಿಡುತ್ತೇವೆ. ಆದ್ದರಿಂದಲೇ ಶ್ರೀರಾಮಕೃಷ್ಣರು ಸಾಂಸಾರಿಕತೆ ಒಳಗೆ ಪ್ರವೇಶಿಸದಂತೆ ನೋಡಿಕೊಳ್ಳಿ ಎಂದು ಎಚ್ಚರಿಕೆ ನೀಡುತ್ತಾರೆ. ನಮ್ಮ ಹಡಗಿಗೆ ಸಾಂಸಾರಿಕತೆ ತಗಲಿಬಿಟ್ಟರೆ ಅದರಲ್ಲಿರುವ ಕಬ್ಬಿಣದ ಭಾಗಕ್ಕೆ ತುಕ್ಕು ಹಿಡಿಯುತ್ತದೆ. ಆಗ ಅದು ಶ್ರೀರಾಮಕೃಷ್ಣರಂತಹ ಮಹಾ ಚುಂಬಕ ಪರ್ವತದ ಹತ್ತಿರ ಹೋದರೂ ನಮ್ಮ ವ್ಯಕ್ತಿತ್ವದ ಬಂಧನ ಕಳಚಿಹೋಗುವುದಿಲ್ಲ.

> ಕಲ್ಲು ನೀರನ್ನು ಹೀರಿಕೊಳ್ಳದೆ ಇರುವಂತೆ ಬದ್ಧಜೀವಿಗಳ ಮೇಲೆ ಆಧ್ಯಾತ್ಮಿಕ ಉಪದೇಶಗಳು ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ.
> —*ಶ್ರೀರಾಮಕೃಷ್ಣ*

### ಆಧ್ಯಾತ್ಮಿಕ ಸಂವಹನದಿಂದ ಪರಿವರ್ತನೆ

ವಿದ್ಯುತ್ ಸಂವಹನದ ಮೂಲಕ ಸಾಮಾನ್ಯ ಕಬ್ಬಿಣವನ್ನೂ ಚುಂಬಕವನ್ನಾಗಿ ಪರಿವರ್ತಿಸಬಹುದು. ಹಾಗೆಯೇ ಭಗವದ್ಭಾವ ಒಬ್ಬ ವ್ಯಕ್ತಿಯನ್ನು ಆವರಿಸಿದಾಗ ಆತನೂ ಒಬ್ಬ ಮಹಾ ಚುಂಬಕ ವ್ಯಕ್ತಿಯಾಗುತ್ತಾನೆ. ಶ್ರೀರಾಮಕೃಷ್ಣರು ಅಂತಹ ವ್ಯಕ್ತಿಯಾಗಿದ್ದರು. ಒಮ್ಮೆ ಅವರನ್ನು ಭೇಟಿಯಾದರೆ ಮತ್ತೊಮ್ಮೆ, ಮಗದೊಮ್ಮೆ ಅವರನ್ನು ಭೇಟಿಯಾಗಬೇಕೆಂಬ ಆಕರ್ಷಣೆಯುಂಟಾಗುತ್ತಿತ್ತು, ಭಕ್ತರಿಗೆ. ಬೇಡವೆಂದರೂ ಕೇಳದೆ ಅವರನ್ನು ಆ ಆಕರ್ಷಣೆ ಶ್ರೀರಾಮಕೃಷ್ಣರೆಡೆಗೆ ಎಳೆದುಕೊಂಡು ಹೋಗುತ್ತಿತ್ತು. ಶ್ರೀರಾಮಕೃಷ್ಣರೇ ನೀಡಿದ ಉದಾಹರಣೆಯ ಮೂಲಕ ವಿವರಿಸಬೇಕೆಂದರೆ, ಅವರು ಪೂರ್ಣವಾಗಿ ಅರಳಿದ ತಾವರೆಯಂತೆ. ತಾವರೆಯು ದುಂಬಿಗಳನ್ನು ಆಕರ್ಷಿಸುವಂತೆ ಅವರು ಭಕ್ತರನ್ನು ಆಕರ್ಷಿಸುತ್ತಿದ್ದರು. ಶ್ರೀರಾಮಕೃಷ್ಣರು ಕೇವಲ ಚುಂಬಕದಂತಿರಲಿಲ್ಲ, ತಾವರೆಯಂತೆಯೂ ಇದ್ದರು. ಚುಂಬಕ ಕೇವಲ ಆಕರ್ಷಿಸುತ್ತದೆ ಅಷ್ಟೇ, ಅದು ಏನನ್ನೂ ನೀಡಲಾರದು. ಆದರೆ ಶ್ರೀರಾಮಕೃಷ್ಣರು ಅಧ್ಯಾತ್ಮದ ಮಕರಂದವನ್ನು ನೀಡುತ್ತಿದ್ದರು.

ಮಹೇಂದ್ರನಾಥ ಗುಪ್ತರು ಮೂರನೆಯ ಬಾರಿ ಶ್ರೀರಾಮಕೃಷ್ಣರೆಡೆಗೆ ಹೋದಾಗ ತಮ್ಮ ಮುಂದೆ ಕುಳಿತಿದ್ದ ಇತರ ಭಕ್ತರನ್ನು ಉದ್ದೇಶಿಸಿ ಶ್ರೀರಾಮಕೃಷ್ಣರು ಹೇಳಿದರು : "ನೋಡಿ, ಒಮ್ಮೆ ಒಬ್ಬ ಒಂದು ನವಿಲಿಗೆ ಅಪರಾಹ್ನ ನಾಲ್ಕು ಗಂಟೆ ಸಮಯಕ್ಕೆ ಅಫೀಮು ತಿನ್ನಿಸಿದ. ಮಾರನೇ ದಿನ ಸರಿಯಾಗಿ ನಾಲ್ಕು ಗಂಟೆಗೆ ನವಿಲು ಮತ್ತೆ ಬಂತು. ಅಫೀಮಿನ ತೆವಲು ಅದನ್ನು ಹಿಡಿದುಬಿಟ್ಟಿತ್ತು. ಅದಕ್ಕಾಗೇ ಆ ಸಮಯಕ್ಕೆ ಸರಿಯಾಗಿ ಅಫೀಮು ತಿನ್ನಲು ಬಂತು."

ಮಹೇಂದ್ರನಾಥ ಗುಪ್ತರು ತಮ್ಮೊಳಗೇ ಭಾವಿಸಿದರು, ಇದು ತಮಗೆ ಅನ್ವಯಿಸುವ ಸರಿಯಾದ ಉದಾಹರಣೆ ಎಂದು. ಮನೆಯಲ್ಲೂ ಶ್ರೀರಾಮಕೃಷ್ಣರ ಯೋಚನೆ ಮಾಡದೆ ಒಂದು ಕ್ಷಣವೂ ಇರಲಾಗಲಿಲ್ಲ ಅವರಿಗೆ, ಮನಸ್ಸು ದಕ್ಷಿಣೇಶ್ವರದಲ್ಲೇ ನೆಲಸಿಬಿಟ್ಟಿತ್ತು. ಮತ್ತೆ ಅಲ್ಲಿಗೆ ಹೋಗುವವರೆಗೂ ನಿಮಿಷಗಳನ್ನು ಎಣಿಸುತ್ತಲೇ ಇರಬೇಕಾಯಿತು. ಶ್ರೀರಾಮಕೃಷ್ಣರ ಎಲ್ಲ ಭಕ್ತರ ಅನುಭವವೂ ಇದೇ. ಮಾತಿಗೆ ನಿಲುಕದ ಒಂದು ಆಕರ್ಷಣೆಯ ವಲಯಕ್ಕೆ ಅವರು ಒಳಗಾಗುತ್ತಿದ್ದರು. ಎಷ್ಟೇ ಪ್ರಯತ್ನಿಸಿದರೂ ಅವರಿಗೆ ಅದರಿಂದ ಹೊರಬರಲು ಆಗುತ್ತಿರಲಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದ "ಮತ್ತೆ ಬಾ" ಎಂಬ ಮೋಡಿಯ ನುಡಿ ಮತ್ತೆ ಅವರನ್ನು ಎಳೆದು ತರುತ್ತಿತ್ತು.

ಚುಂಬಕ ಚಿಕಿತ್ಸೆ (Magnetic therapy) ಎಂಬ ವೈದ್ಯಕೀಯ ಚಿಕಿತ್ಸಾ ವಿಧಾನವು ಇತ್ತೀಚೆಗೆ ಪ್ರಚಲಿತವಾಗುತ್ತಿದೆ. ಕಾಯಿಲೆಗೆ ಅನುಗುಣವಾಗಿ ದೇಹದ ಬೇರೆ ಬೇರೆ ಭಾಗಗಳ ಮೇಲೆ ಚುಂಬಕವನ್ನು ಸ್ಪರ್ಶಿಸಿ ಕಾಯಿಲೆಯನ್ನು ಗುಣಪಡಿಸುತ್ತಾರೆ. ಶ್ರೀರಾಮಕೃಷ್ಣರು ಭವರೋಗ ವೈದ್ಯರು. ಅವರದೇ ವಿಶಿಷ್ಟವಾದ ಒಂದು ಚುಂಬಕ ಚಿಕಿತ್ಸೆ ಇದೆ. ಕೆಲವರಿಗೆ ಹಸ್ತ ಸ್ಪರ್ಶ, ಕೆಲವರಿಗೆ ಪಾದಸ್ಪರ್ಶ—ಹೀಗೆ ತಮ್ಮ ಚುಂಬಕ ಸ್ಪರ್ಶದ ಮೂಲಕವೇ ಅವರು ಭಕ್ತರ ಮನಸ್ಸನ್ನು ತಿದ್ದಿ ಸರಿಪಡಿಸುತ್ತಿದ್ದರು, ಅದನ್ನು ಭಗವನ್ಮುಖಿಗೊಳಿಸುತ್ತಿದ್ದರು.

### ಭಗವನ್ಮುಖವಾದ ಮನಸ್ಸು

ಶ್ರೀರಾಮಕೃಷ್ಣರು ಉತ್ತರಮುಖಿಯ ಉದಾಹರಣೆಯನ್ನು ನೀಡುತ್ತಿದ್ದರು. ಅದರಲ್ಲಿ ಅಯಸ್ಕಾಂತದ ಮುಳ್ಳು ಯಾವಾಗಲೂ ಉತ್ತರದ ಕಡೆಗೆ ಮುಖ ಮಾಡಿಕೊಂಡಿರುತ್ತದೆ. ಆ ಉಪಕರಣವನ್ನು ಯಾವುದೇ ದಿಕ್ಕಿಗೆ ತಿರುಗಿಸಿದರೂ ಆ ಮುಳ್ಳು ಮಾತ್ರ ಉತ್ತರ ದಿಕ್ಕಿಗೆ ಮುಖ ಮಾಡಿಕೊಂಡಿರುತ್ತದೆ. ಹಾಗೆಯೇ ಶ್ರೀರಾಮಕೃಷ್ಣರ ಮನಸ್ಸು ಯಾವಾಗಲೂ ಭಗವನ್ಮುಖವಾಗಿಯೇ

ಇರುತ್ತಿತ್ತು. ಅವರು ಎಲ್ಲೇ ಇರಲಿ, ಯಾವುದೇ ವಿಷಯದ ಬಗ್ಗೆ ಮಾತನಾಡುತ್ತಿರಲಿ, ಏನನ್ನೇ ನೋಡಲಿ ಕೇಳಲಿ ಎಲ್ಲವನ್ನೂ ದೇವರ ವಿಷಯದ ಕಡೆ ತಿರುಗಿಸುತ್ತಿದ್ದರು. ಇಂದ್ರಿಯ ವಿಷಯಕ್ಕೆ ಸಂಬಂಧಿಸಿದ ಯಾವುದನ್ನೂ ಅವರಿಗೆ ಸಹಿಸಲಾಗುತ್ತಿರಲಿಲ್ಲ. ಅಯಸ್ಕಾಂತದ ವಿರುದ್ಧ ಧ್ರುವಗಳು ಒಂದನ್ನೊಂದು ವಿಕರ್ಷಿಸುವಂತೆ ಅವರ ಇಡೀ ವ್ಯಕ್ತಿತ್ವವೇ ಕಾಮಕಾಂಚನಗಳಿಗೆ ಸಂಬಂಧಿಸಿದ ಯಾವುದನ್ನೇ ಆಗಲಿ ದೂರಸರಿಸಿಬಿಡುತ್ತಿತ್ತು. ಅದರ ಸ್ಪರ್ಶವನ್ನೇ ಅವರಿಗೆ ಸಹಿಸಲಾಗುತ್ತಿರಲಿಲ್ಲ. ಚುಂಬಕದ ಸಮಾನ ಧ್ರುವಗಳ ಆಕರ್ಷಣೆಯನ್ನು ಭಗವದನುರಾಗಕ್ಕೂ ವಿರುದ್ಧ ಧ್ರುವಗಳ ವಿಕರ್ಷಣೆಯನ್ನು ವೈರಾಗ್ಯಕ್ಕೂ ಹೋಲಿಸಬಹುದು. ಹೀಗೆ ಭಗವದನುರಾಗ ಮತ್ತು ವಿಷಯಗಳ ಬಗ್ಗೆ ವಿರಾಗ ಈ ಎರಡೂ ತ್ಯಾಗದ ಅತಿ ಮುಖ್ಯ ಲಕ್ಷಣಗಳು.

ಇಂದಿನ ಭಯೋತ್ಪಾದನೆಯ ಯುಗದಲ್ಲಿ, ಎಲ್ಲವನ್ನೂ ವ್ಯಾಪಾರೀಕರಣಗೊಳಿಸುತ್ತಿರುವ ಇಂದ್ರಿಯ ಸುಖವೇ ಸರ್ವಸ್ವವಾಗಿರುವ ಇಂದಿನ ಜಾಗತಿಕ ಸಂದರ್ಭದಲ್ಲಿ ವೀತರಾಗಭಯಕ್ರೋಧ (ರಾಗ, ಭಯ, ಕ್ರೋಧಗಳಿಂದ ಮುಕ್ತ)ರಾದ ಶ್ರೀರಾಮಕೃಷ್ಣರ ಆದರ್ಶದ ಚುಂಬಕಸ್ಪರ್ಶ ಅತ್ಯಾವಶ್ಯಕ. ಪ್ರಸಿದ್ಧ ಇತಿಹಾಸಜ್ಞ ಆರ್ನಾಲ್ಡ್ ಟಾಯ್ನ್‌ಬಿ ಹೇಳುತ್ತಾರೆ : "ಮಾನವ ಇತಿಹಾಸದ ಈ ಅತ್ಯಂತ ಅಪಾಯಕರ ಸಂದರ್ಭದಲ್ಲಿ ಚಕ್ರವರ್ತಿ ಅಶೋಕ ಮತ್ತು ಮಹಾತ್ಮಾ ಗಾಂಧಿಯವರ ಅಹಿಂಸಾತತ್ತ್ವ ಹಾಗೂ ಶ್ರೀರಾಮಕೃಷ್ಣರು ತಮ್ಮ ಜೀವನದಲ್ಲಿ ಪ್ರಮಾಣೀಕರಿಸಿರುವ ಧರ್ಮಸಮನ್ವಯ ಭಾವ—ಈ ಭಾರತೀಯ ಮಾರ್ಗವೊಂದೇ ಮಾನವಕೋಟಿಯನ್ನು ಉದ್ಧರಿಸುವಂತಹುದು. ಮಾನವ ಜನಾಂಗವು ಒಂದು ಕುಟುಂಬವಾಗಿ ಬಾಳಲು ಆವಶ್ಯಕವಾದ ಮನೋಭಾವವನ್ನೂ ಸ್ಫೂರ್ತಿಯನ್ನೂ ಈ ಮಾರ್ಗವು ನೀಡುತ್ತದೆ."

## "ಮತ್ತೊಮ್ಮೆ ಬಾ!"

"ಜಪ ತಪ ಸಮಾಧಿಯಲಿ ನಾವು ಮಗ್ನರು;
ಮತ್ತೆ ಬಾರದಿರಿ ಇತ್ತ! ಬಂದೆಮಗೆ
ತೊಂದರೆಯ ಕೊಡಬೇಡಿ !" ಎಂಬುದೆ
ಬಹಳ ಯೋಗಿ, ಸಂನ್ಯಾಸಿಗಳ ಮನವಿ,
ಇಲ್ಲವೆ ಆಜ್ಞೆ!
ಅವತಾರಶ್ರೇಷ್ಠ ಶ್ರೀರಾಮಕೃಷ್ಣರ ಸೂತ್ರ ಬೇರೆ;
ಸೂತ್ರವೇ? ಮಂತ್ರ :
"ಮತ್ತೊಮ್ಮೆ ಬಾ!" ಎನುವವರ ಕಣ್ಣಿಗೆ ಸಿಕ್ಕಿ,
ಒಮ್ಮೆ ಬಂದವರು ಮತ್ತೊಮ್ಮೆ,
ಇನ್ನೊಮ್ಮೆ ಬರುವರು,
ಕಡೆಗೆ ಋಷಿಗೆ ಶಾಶ್ವತವಾಗಿ ವಶವಾಗುವರು;
ದೇವಜಾಲಕ್ಕೆ ಬಿದ್ದ ಮಿಗವಾಗುವರು;
ಮಗುವಾಗುವರು ಯತಿಯ ವಾತ್ಸಲ್ಯವಕ್ಷದಲಿ;
ಗರಿಯಾಗುವರು ಪರಮಹಂಸ ಶ್ರೀಪಕ್ಷದಲಿ!
"ಮತ್ತೆ ಬಾ", "ಮತ್ತೆ ಬಾ"—
ಎಂಥ ಮಾಧುರ್ಯದುಲಿ!
ಉರುಳತೊಡಗಿತು ಅಂದೇ
ಸರ್ವೋದಯದ ಗಾಲಿ;
ಆಧುನಿಕ ಅವತಾರಕೆಲ್ಲಿ ಹೋಲಿಕೆ? ಹೇಳಿ?

— ಡಾ. ಸಿ.ಪಿ.ಕೆ.

ರಾಮಕೃಷ್ಣ ಪರಮಹಂಸರು ಪೂರ್ಣತೆಯ ಸಾಕಾರರೂಪ. ಅವರದು ಶ್ರೇಷ್ಠ ಪ್ರಜ್ಞಾತೀತ ಜೀವನ. ಅದು ಮಾತ್ರ ನಮ್ಮನ್ನು ಸಾಗರದೆಡೆಗೆ ಕರೆದುಕೊಂಡು ಹೋಗುವ ಅಸಂಖ್ಯ ಪ್ರವಾಹಗಳನ್ನು ವೀಕ್ಷಿಸಬಲ್ಲದು. ಅವರು ನಮ್ಮ ಹಿಂದಿರುವ ಮಹಾಶಕ್ತಿಯ ಪ್ರಮಾಣ ಮತ್ತು ನಮ್ಮ ಮುಂದಿರುವ ಭವಿಷ್ಯ. ಅಂತಹ ಶ್ರೇಷ್ಠ ಜನ್ಮವು ಮಹೋನ್ನತ ಘಟನೆಗಳನ್ನು ಹುಟ್ಟುಹಾಕುತ್ತದೆ.... ಇನ್ನು ಐನೂರು ವರ್ಷಗಳವರೆಗೆ ರಾಮಕೃಷ್ಣ ಪರಮಹಂಸರಂತಹ ಇನ್ನೊಂದು ಜನ್ಮವನ್ನು ಜಗತ್ತು ಭರಿಸಲಾರದು. ಅವರು ಬಿಟ್ಟುಹೋಗಿರುವ ಚಿಂತನರಾಶಿಯನ್ನು ಮೊದಲು ನಾವು ಅನುಭವ ವಸ್ತುವನ್ನಾಗಿ ಪರಿವರ್ತಿಸಬೇಕು, ಅವರಿಂದ ಹೊರಹೊಮ್ಮಿದ ಆಧ್ಯಾತ್ಮಿಕ ಶಕ್ತಿಯು ಮಹಾಕಾರ್ಯಸಿದ್ಧಿಯಾಗಿ ಪರಿಣಮಿಸಬೇಕು. ಇದನ್ನು ನಾವು ಮಾಡದೆ ಇನ್ನೂ ಹೆಚ್ಚಿನದನ್ನು ಕೇಳುವುದಕ್ಕೆ ನಮಗೆ ಯಾವ ಹಕ್ಕಿದೆ? ಹೆಚ್ಚಿನದನ್ನು ಪಡೆದು ನಾವು ಮಾಡುವುದಾದರೂ ಏನು?

ಶ್ರೀರಾಮಕೃಷ್ಣರು ಎಲ್ಲ ಧಾರ್ಮಿಕ ಮುಂದಾಳುಗಳ ಒಂದು ಸಮುಚ್ಚಯವನ್ನು ಪ್ರತಿನಿಧಿಸುತ್ತಾರೆ. ಅವರಿಂದ ಪ್ರಾರಂಭಗೊಂಡ ಆಂದೋಲನವು ಎಲ್ಲ ಸ್ಥಳೀಯ ಮತ್ತು ಚಿಕ್ಕ ಪುಟ್ಟ ಆಂದೋಲನಗಳೆಲ್ಲವನ್ನೂ ಒಂದುಗೂಡಿಸುವುದು ಮತ್ತು ವ್ಯವಸ್ಥಿತಗೊಳಿಸುವುದು.

...ಭಾರತವು ಇಡೀ ಜಗತ್ತನ್ನು ಆರ್ಯಗೊಳಿಸಬೇಕಾಗಿದೆ. ಹೀಗೆ ಮಾಡಲು ಅದು ಮೊದಲು ತನ್ನ ಮೊದಲಿನ ಆರ್ಯಸ್ಥಿತಿಯನ್ನು ಮುಟ್ಟಬೇಕು. ಈ ಕಾರ್ಯವನ್ನು ಸಾಧಿಸುವುದಕ್ಕಾಗಿಯೇ ಭಗವಾನ್ ಶ್ರೀರಾಮಕೃಷ್ಣರು ಬಂದುದು ಮತ್ತು ವಿವೇಕಾನಂದರು ಬೋಧಿಸಿದುದು.

—ಶ್ರೀ ಅರವಿಂದರು.